ಪೊಲೀಸರು ಎಂದು ಹೇಳಿ ಸರ ಎಗರಿಸಿದರು

ಸರಸ್ವತಿಪುರಂ ಕೃಷ್ಣಧಾಮದ ಬಳಿ ಘಟನೆ; ೩೨ ಗ್ರಾಂ ತೂಕದ ಸರ ಕಳೆದುಕೊಂಡ ಮಹಿಳೆ

ಮೈಸೂರು,ಸೆ.೧೨– ನಯವಂಚಕರ ಬಗ್ಗೆ ಎಷ್ಟೇ ಸುದ್ದಿಗಳು ಪ್ರಕಟವಾದರೂ ಜನರು ಎಚ್ಚೆತ್ತುಕೊಳ್ಳುವುದಿಲ್ಲ. ಇದಕ್ಕೆ ಉದಾಹರಣೆ ಎಂಬಂತೆ ಘಟನೆಯೊಂದು ನಡೆದಿದೆ. ನಾವು ಪೊಲೀಸರು, ಇಲ್ಲಿ ಜನಸಂದಣಿ ಹೆಚ್ಚಾಗಿದೆ, ನಿಮ್ಮ ಆಭರಣಗಳನ್ನೆಲ್ಲಾ ನಮಗೆ ನೀಡಿ, ಮತ್ತೆ ಬಂದು ಪಡೆಯಿರಿ ಎಂದ ದುಷ್ಕರ್ಮಿಗಳಿಬ್ಬರು ಮಹಿಳೆಯ ಸರ ಎಗರಿಸಿದ ಘಟನೆ ಮೈಸೂರಿನ ಸರಸ್ವತಿಪುರಂನ ಕೃಷ್ಣಧಾಮ ದೇವಸ್ಥಾನದ ಬಳಿ ನಡೆದಿದೆ.

ಸರಸ್ವತಿಪುರಂ ೧೪ನೇ ಮುಖ್ಯರಸ್ತೆ ನಿವಾಸಿ ನಾಗರತ್ನಮ್ಮ (೬೫) ಎಂಬವರು ದುಷ್ಕರ್ಮಿಗಳ ಸಂಚಿನಿಂದ ಸರ ಕಳೆದುಕೊಂಡವರು.

ನಾಗರತ್ನಮ್ಮ ಅವರು ಮಂಗಳವಾರ ಕೃಷ್ಣಧಾಮಕ್ಕೆ ತೆರಳುವ ಉದ್ದೇಶದಿಂದ ರಸ್ತೆಯಲ್ಲಿ ನಡೆದು ಬರುತ್ತಿದ್ದರು. ಇದೇ ವೇಳೆ ಸಮೀಪದಲ್ಲಿ ನಿಂತಿದ್ದ ಇಬ್ಬರು ದುಷ್ಕರ್ಮಿಗಳು, ಅಮ್ಮ ನಾವು ಪೊಲೀಸಿನವರು. ಒಳಗಡೆ ತುಂಬಾ ರಶ್ ಇದೆ. ನಿಮ್ಮ ಬಂಗಾರಗಳನ್ನು ಇಲ್ಲೇ ಕೊಟ್ಟು ಹೋಗಿ ಎಂದಿದ್ದಾರೆ.

ಅವರನ್ನು ಅನುಮಾನದಿಂದ ನೋಡುತ್ತಿದ್ದ ವೇಳೆಯಲ್ಲಿಯೇ ಸ್ಥಳಕ್ಕೆ ಬಂದ ಅಪರಿಚಿತನೊಬ್ಬ ತನ್ನ ಬಳಿಯಿದ್ದ ಸರವನ್ನು ಅವರಿಗೆ ನೀಡಿದಂತೆ ನಾಟಕವಾಡಿದ್ದಾನೆ. ಇದನ್ನು ನೋಡಿದ ನಾಗರತ್ನಮ್ಮ ಇವರು ಪೊಲೀಸರೇ ಇರಬೇಕೆಂದು ಭಾವಿಸಿ ತನ್ನ ೩೨ ಗ್ರಾಂ ತೂಕದ ಚಿನ್ನದ ಸರ ಹಾಗೂ ೪ ಬಳೆಗಳನ್ನು ಅವರಿಗೆ ನೀಡಿದ್ದಾರೆ.

ನಂತರ ಆಗಂತುಕರು ಒಂದು ಕಾಗದದಲ್ಲಿ ಅವುಗಳನ್ನು ಇಟ್ಟಂತೆ ಮಾಡಿ ನಾಗರತ್ನಮ್ಮ ಅವರಿಗೆ ನೀಡಿದ್ದಾರೆ. ಮನೆಗೆ ಹೋಗಿ ಬೀರುವಿನಲ್ಲಿ ಇಡಿ ಎಂದು ಹೇಳಿ ಸ್ಥಳದಿಂದ ಕಾಲ್ಕಿತ್ತಿದ್ದಾರೆ. ಸ್ವಲ್ಪ ದೂರ ತೆರಳಿದ ನಂತರ ಅನುಮಾನಗೊಂಡ ನಾಗರತ್ನಮ್ಮ, ಪೊಟ್ಟಣವನ್ನು ಬಿಚ್ಚಿ ನೋಡಿದಾಗ ಅದರಲ್ಲಿ ಬಳೆಗಳು ಮಾತ್ರ ವಿದ್ದು, ಸರವನ್ನು ದುಷ್ಕರ್ಮಿಗಳು ಹೊತ್ತೊಯ್ದಿದ್ದರು.

ಇದರಿಂದ ಆತಂಕಗೊಂಡ ಆಕೆ ಸಮೀಪದಲ್ಲಿಯೇ ಇದ್ದ ಸರಸ್ವತಿಪುರಂ ಠಾಣೆಗೆ ತೆರಳಿ ದೂರು ದಾಖಲಿಸಿದ್ದಾರೆ. ಸ್ಥಳಕ್ಕೆ ಸರಸ್ವತಿಪುರಂ ಠಾಣೆ ಇನ್‌ಸ್ಪೆಕ್ಟರ್ ನಾಗೇಗೌಡ, ಸಬ್ ಇನ್‌ಸ್ಪೆಕ್ಟರ್ ಮೋಹನ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

> ಆಗಂತುಕರು ಆಗಿಂದಾಗ್ಗೆ ಇಂತಹ ವಂಚನೆಗಳನ್ನು ನಡೆಸುತ್ತಿರುತ್ತಾರೆ. ಯಾವುದೇ ಪೊಲೀಸರು ಕೂಡ ಆಭರಣವನ್ನು ಬಿಚ್ಚಿಕೊಡುವಂತೆ ಕೇಳುವುದಿಲ್ಲ. ದಯವಿಟ್ಟು ಯಾರೂ ಆಭರಣಗಳನ್ನು ತೆಗೆದುಕೊಡಬೇಡಿ. ನಿಮ್ಮನ್ನು ಯಾಮಾರಿಸುವುದಕ್ಕೋಸ್ಕರವೇ ಈ ರೀತಿ ಕೇಳುತ್ತಾರೆ. ನಿಮ್ಮ ಆಭರಣದ ಮೇಲೆ ಗಮನವಿರಲಿ. ಅನುಮಾನಾಸ್ಪದ ವ್ಯಕ್ತಿಗಳು ಕಂಡುಬಂದಲ್ಲಿ ಪೊಲೀಸರಿಗೆ ದೂರು ನೀಡಿ.
>
> **–ಕೆ.ಎನ್.ನಾಗೇಗೌಡ,** ಇನ್‌ಸ್ಪೆಕ್ಟರ್ ಸರಸ್ವತಿಪುರಂ ಠಾಣೆ.

ನಾಳೆ ಚುನಾವಣೆ

ಮೈಸೂರು,ಸೆ.೧೨–ಜಿಲ್ಲಾ ಪತ್ರಕರ್ತರ ಅಭ್ಯುದಯ ಸಹಕಾರ ಸಂಘದ ೫ ವರ್ಷಗಳ ಅವಧಿಗೆ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆಯಲ್ಲಿ ೧೭ ಮಂದಿ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದು, ಸೆ.೧೪ರಂದು ಮಧ್ಯಾಹ್ನ ೩ಕ್ಕೆ ಸಂಘದ ಕಚೇರಿಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷರ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ ಎಂದು ಸಂಘದ ಮುಖ್ಯ ಪ್ರವರ್ತಕರ ಪ್ರಕಟಣೆ ತಿಳಿಸಿದೆ.

ವನ್ಯ ಪ್ರಾಣಿ ಛಾಯಾಚಿತ್ರ ಸ್ಪರ್ಧೆ

ಮೈಸೂರು,ಸೆ.೧೨–ನಗರದ ಶ್ರೀ ಚಾಮರಾಜೇಂದ್ರ ಮೃಗಾಲಯದ ವತಿಯಿಂದ ಅ. ೨ರಿಂದ ೮ರವರೆಗೆ ಆಚರಿಸಲಿರುವ ವನ್ಯಪ್ರಾಣಿ ಸಪ್ತಾಹದ ಪ್ರಯುಕ್ತ ವನ್ಯಪ್ರಾಣಿ ಛಾಯಾಗ್ರಹಣ ಸ್ಪರ್ಧೆ ಮತ್ತು ಛಾಯಾಚಿತ್ರಗಳ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ವನ್ಯಪ್ರಾಣಿ ಮತ್ತು ಮೃಗಾಲಯ ಪ್ರವರ್ಗಗಳು ಇರುತ್ತವೆ.

ಪ್ರವೇಶಗಳನ್ನು ಸ್ವೀಕರಿಸಲು ಸೆ.೨೫ ಕೊನೆಯ ದಿನವಾಗಿದೆ. ಸೆ. ೨೬ರಂದು ಬಹುಮಾನಿತರನ್ನು ಆಯ್ಕೆ ಮಾಡಲಾಗುತ್ತದೆ. ಬಹುಮಾನಿತರ ಹೆಸರುಗಳನ್ನು ಅ. ೨ರಂದು ಪ್ರಕಟಿಸಲಾಗುತ್ತದೆ. ಅ.೨ರಿಂದ ೮ರವರೆಗೆ ಛಾಯಾ ಚಿತ್ರಗಳ ಪ್ರದರ್ಶನ ನಡೆಯಲಿದೆ. ವಿವರಗಳಿಗೆ ದೂ.ಸಂ.: ೦೮೨೧–೨೫೨೦೩೦೨, ೨೪೪೦೭೫೨ ಸಂಪರ್ಕಿಸಬಹುದು.

ಬೊಂಬೆ ಜೋಡಣೆ ಸ್ಪರ್ಧೆ

ಮೈಸೂರು,ಸೆ.೧೨–ಬಡಗನಾಡು ಬಳಗದ ಮಹಿಳಾ ವಿಭಾಗದಿಂದ ದಸರಾ ಮಹೋತ್ಸವದ ಪ್ರಯುಕ್ತ ಬಳಗದ ಸದಸ್ಯರು ಮತ್ತು ಸಾರ್ವಜನಿಕರಿಗೆ ಬೊಂಬೆ ಜೋಡಣೆ ಸ್ಪರ್ಧೆ ಆಯೋಜಿಸಲಾಗಿದೆ.

ಸ್ಪರ್ಧೆಯಲ್ಲಿ ಭಾಗವಹಿಸಲು ಆಸಕ್ತಿ ಇರುವವರು ಸೆ. ೧೮ರೊಳಗೆ ಹೆಸರು ನೋಂದಾಯಿಸಬೇಕು. ಸ್ಪರ್ಧೆ ಮೈಸೂರು ನಗರಕ್ಕೆ ಮಾತ್ರ ಸೀಮಿತವಾಗಿದೆ. ಹೆಸರು ನೋಂದಾವಣೆಗೆ ಮತ್ತು ವಿವರಗಳಿಗೆ ಮೊ.ಸಂ.:೯೭೦೦೬೨೯೧೨೪, ದೂ.ಸಂ.: ೦೮೨೧–೪೨೪೨೪೩೫, ೨೫೪೧೦೩೭೬ ಸಂಪರ್ಕಿಸಬಹುದು.

ಕೌಶಲ ತರಬೇತಿ

ಮೈಸೂರು,ಸೆ.೧೨–ರುಡ್‌ಸೆಟ್ ಸಂಸ್ಥೆ ವತಿಯಿಂದ ಅಕ್ಟೋಬರ್ ತಿಂಗಳಲ್ಲಿ ವಿವಿಧ ಕೌಶಲ ತರಬೇತಿಗಳನ್ನು ನಡೆಸಲು ತೀರ್ಮಾನಿಸಿದ್ದು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಮೊಬೈಲ್ ಸರ್ವಿಸಿಂಗ್, ಮಹಿಳೆಯರಿಗಾಗಿ ಹೊಲಿಗೆ ತರಬೇತಿ, ಬ್ಯೂಟಿಪಾರ್ಲರ್ ನಿರ್ವಹಣೆ, ಮಹಿಳೆಯರಿಗಾಗಿ ಕಂಪ್ಯೂಟರ್ ಡಿಟಿಪಿ ತರಬೇತಿ ನೀಡಲಾಗುವುದು. ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಗಳಿಗೆ ಸೇರಿದ ೧೮ ರಿಂದ ೪೫ ವರ್ಷ ವಯೋಮಾನದ ಗ್ರಾಮೀಣ ಪ್ರದೇಶದಲ್ಲಿನ ಯಾವುದೇ ವಿದ್ಯಾಭ್ಯಾಸವನ್ನು ಪಡೆದಿರುವ ಯುವತಿ/ಯುವಕರು ಅರ್ಜಿಯನ್ನು ಸೆ. ೩೦ರೊಳಗೆ ಸಲ್ಲಿಸಬೇಕು. ತರಬೇತಿಯು ಉಚಿತವಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ.: ೦೮೨೧–೨೫೧೯೬೬೩, ಮೊ.ಸಂ.: ೯೪೪೪೦೧೪೩೪೮ ಸಂಪರ್ಕಿಸಬಹುದು.

೧೫ಕ್ಕೆ ಪಾಲಿಕೆ ಸಭೆ

ಮೈಸೂರು,ಸೆ.೧೨–ಮಹಾನಗರ ಪಾಲಿಕೆ ಸಾಮಾನ್ಯ ಕೌನ್ಸಿಲ್ ಸಭೆ ಸೆ.೧೫ರಂದು ಮಧ್ಯಾಹ್ನ ೩ ಗಂಟೆಗೆ ನಾಲ್ವಡಿ ಕೃಷ್ಣರಾಜ ಸಭಾಂಗಣದಲ್ಲಿ ನಡೆಯಲಿದೆ ಎಂದು ಪಾಲಿಕೆ ಕೌನ್ಸಿಲ್ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಾರಂಪರಿಕ ಸೌಂದರ್ಯ ಉಳಿಸಲು ಸಹಕರಿಸಿ: ಡಿಸಿ

ಬಿಎಐ ಮೈಸೂರು ಶಾಖೆಯಿಂದ ಇಂಜಿನಿಯರುಗಳು ಹಾಗೂ ಶಿಕ್ಷಕರ ದಿನ

BUILDERS' ASSOCIATION OF INDIA
MYSURU CENTRE
ENGINEERS' DAY AND TEACHERS' DAY
CELEBRATIO

ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಶಾಖೆ ವತಿಯಿಂದ ಮಂಗಳವಾರ ಖಾಸಗಿ ಹೋಟೆಲ್‌ನಲ್ಲಿ ಪಿ.ಎ.ಭಾರ್ಗವ ಅವರಿಗೆ ಅತ್ಯುತ್ತಮ ಇಂಜಿನಿಯರ್, ಎಂ.ಎಸ್.ಜಯದೇವ ಅವರಿಗೆ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಜಿಲ್ಲಾಧಿಕಾರಿ ಡಿ.ರಂದೀಪ್, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ರಾಜ್ಯಾಧ್ಯಕ್ಷ ಎಸ್.ಆರ್.ಸ್ವಾಮಿ, ಜಿಲ್ಲಾಧ್ಯಕ್ಷ ಎಸ್.ಮಹದೇವಸ್ವಾಮಿ, ಕಾರ್ಯದರ್ಶಿ ಎಂ.ರತ್ನರಾಜ್ ಚಿತ್ರದಲ್ಲಿದ್ದಾರೆ.

ಮೈಸೂರು,ಸೆ.೧೨– 'ಪಾರಂಪರಿಕ ನಗರಿ' ಮೈಸೂರಿನ ಸೌಂದರ್ಯವನ್ನು ಉಳಿಸುವ ನಿಟ್ಟಿನಲ್ಲಿ ಎಲ್ಲರ ಸಹಕಾರ ಮುಖ್ಯ ಎಂದು ಜಿಲ್ಲಾಧಿಕಾರಿ ಡಿ.ರಂದೀಪ್ ಹೇಳಿದರು.

ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಶಾಖೆಯಿಂದ ಮಂಗಳವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ 'ಇಂಜಿನಿಯರುಗಳ ದಿನ' ಹಾಗೂ 'ಶಿಕ್ಷಕರ ದಿನ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮೈಸೂರಿನಲ್ಲಿ ಸಾಕಷ್ಟು ಪಾರಂಪರಿಕ ಕಟ್ಟಡಗಳಿದ್ದು, ಅವುಗಳನ್ನು ಸಂರಕ್ಷಿಸುವ ಕೆಲಸ ಆಗಬೇಕಿದೆ. ನಗರದ ಸೌಂದರ್ಯ ಉಳಿಸುವ ನಿಟ್ಟಿನಲ್ಲಿ ಬಿಲ್ಡರ್ಸ್ ಹಾಗೂ ರಿಯಲ್ ಎಸ್ಟೇಟ್ ಉದ್ಯಮಿಗಳು ಸಹಕರಿಸಬೇಕಿದೆ ಎಂದರು.

ಪಾರಂಪರಿಕ ಕಟ್ಟಡಗಳ ನಿಯಮಾನುಸಾರವಾಗಿಯೇ ನೂತನ ಕಟ್ಟಡಗಳನ್ನು ನಿರ್ಮಿಸುವ ಮೂಲಕ ಮೈಸೂರನ್ನು ಬೆಂಗಳೂರಿನ ರೀತಿ ಆಗದಂತೆ ನಗರದ ಅಂದ ಕಾಪಾಡಬೇಕಿದೆ. ಜೈಪುರ, ಚಂಡೀಘಡಗಳಿಗೆ ಹೋಲಿಸಿದರೆ ಪ್ರವಾಸಿ ತಾಣ ಹಾಗೂ ಪಾರಂಪರಿಕ ನಗರವಾಗಿ ಮೈಸೂರು ತನ್ನದೇ ಆದ ಖ್ಯಾತಿ ಹೊಂದಿದ್ದು, ಅದನ್ನು ಉಳಿಸಿಕೊಂಡು ಹೋಗಬೇಕಿದೆ ಎಂದು ತಿಳಿಸಿದರು.

ಬೆಂಗಳೂರಿನಲ್ಲಿ ಇಂಜಿನಿಯರಿಂಗ್ ಮುಗಿಸಿದ ದಿನಗಳು ಈ ಕಾರ್ಯಕ್ರಮದ ಮೂಲಕ ನೆನಪಾದವು. ಇಂದು ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಸವಾಲು ಹೆಚ್ಚಾಗಿದೆ. ಇಂಜಿನಿಯರ್ ಹಾಗೂ ಶಿಕ್ಷಕರು ಇಬ್ಬರೂ ಸಮಾಜದ ಅಭಿವೃದ್ಧಿಗೆ ಶ್ರಮಿಸುವವರು. ಅಂತಹ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರನ್ನು ಅಭಿನಂದಿಸುತ್ತಿರುವುದು ಶ್ಲಾಘನೀಯವಾದುದು ಎಂದು ನುಡಿದರು.

ಕಾರ್ಯಕ್ರಮದಲ್ಲಿ ಪಿ.ಎ.ಭಾರ್ಗವ ಅವರಿಗೆ ಅತ್ಯುತ್ತಮ ಇಂಜಿನಿಯರ್ ಹಾಗೂ ಎಂ.ಎಸ್.ಜಯದೇವ ಅವರಿಗೆ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ರಾಜ್ಯಾಧ್ಯಕ್ಷ ಎಸ್.ಆರ್.ಸ್ವಾಮಿ, ಜಿಲ್ಲಾಧ್ಯಕ್ಷ ಎಸ್.ಮಹದೇವಸ್ವಾಮಿ, ಕಾರ್ಯದರ್ಶಿ ಎಂ.ರತ್ನರಾಜ್ ಉಪಸ್ಥಿತರಿದ್ದರು.

ನಿಧನ ವಾರ್ತೆ

ಶ್ರೀರಾಂಪುರದ ಮಂಗೇಶ್ ಡಿ.ಮುಗ್ವೆ

ಮೈಸೂರು,ಸೆ.೧೨– ಶ್ರೀರಾಂಪುರ ನಿವಾಸಿ ಹಾಗೂ ಎಸ್‌ಬಿಐ ಬ್ಯಾಂಕಿನ ಹಿರಿಯ ವ್ಯವಸ್ಥಾಪಕ ಮಂಗೇಶ್ ದತ್ತಾತ್ರೇಯ ಮುಗ್ವೆ(೮೦) ನಿಧನರಾದರು.

ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ಶ್ರೀರಾಂಪುರದ ಬಳಿ ಇರುವ ಸ್ಮಶಾನದಲ್ಲಿ ಭಾನುವಾರ ನೆರವೇರಿತು.

ಗಂಗೋತ್ರಿ ಬಡಾವಣೆ ಶ್ರೀನಿವಾಸ್

ಮೈಸೂರು,ಸೆ.೧೨– ಮಾನಸಗಂಗೋತ್ರಿ ಬಡಾವಣೆ ನಿವಾಸಿ ಶ್ರೀನಿವಾಸ ರಾವ್(೩೨) ಭಾನುವಾರ ಸಂಜೆ ನಿಧನರಾದರು.

ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ಮಾನಸಗಂಗೋತ್ರಿ ಬಳಿ ಇರುವ ಸ್ಮಶಾನದಲ್ಲಿ ನೆರವೇರಿತು.

ಕೆ.ಆರ್.ಮೊಹಲ್ಲಾದ ಶಂಕರನಾರಾಯಣ

ಮೈಸೂರು,ಸೆ.೧೨– ಕೆ.ಆರ್.ಮೊಹಲ್ಲಾದ ನಿವಾಸಿ ಶಂಕರನಾರಾಯಣ(೬೮) ಸೋಮವಾರ ನಿಧನರಾದರು.

ಇಬ್ಬರು ಪುತ್ರರು ಹಾಗೂ ಅಪಾರ ಬಂಧುಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ನೆರವೇರಿತು.

ಜೆ.ಪಿ.ನಗರದ ದೇವಮ್ಮ

ಮೈಸೂರು,ಸೆ.೧೨– ಜೆ.ಪಿ.ನಗರ ನಿವಾಸಿ ದೇವಮ್ಮ(೬೯) ಶನಿವಾರ ಮಧ್ಯಾಹ್ನ ನಿಧನರಾದರು.

ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸ್ಮಶಾನದಲ್ಲಿ ನೆರವೇರಿತು.

ಚಾಮರಾಜ ಮೊಹಲ್ಲಾದ ತಾಯಮ್ಮ

ಮೈಸೂರು,ಸೆ.೧೨– ಚಾಮರಾಜ ಮೊಹಲ್ಲಾ ನಾರಾಯಣ ಶಾಸ್ತ್ರೀ ರಸ್ತೆ ನಿವಾಸಿ ತಾಯಮ್ಮ(೮೦) ನಿಧನರಾದರು.

ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸ್ಮಶಾನದಲ್ಲಿ ನೆರವೇರಿತು.

ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರ ಪ್ರತಿಭಟನೆ

ದಸರಾ ಹಿನ್ನೆಲೆಯ ಅಭಿವೃದ್ಧಿ ಕಾರ್ಯಗಳು ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ಆರೋಪಿಸಿ ಬಿಜೆಪಿ ಯುವ ಮೋರ್ಚಾ ಕಾರ್ಯ ಕರ್ತರು ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದ ಮುಂಭಾಗ ಪ್ರತಿಭಟನೆ ನಡೆಸಿದರು. ಮೈಸೂರು ಯುವ ಮೋರ್ಚಾ ನಗರಾಧ್ಯಕ್ಷ ಕೆ.ಗೋಕುಲ್ ಗೋವರ್ಧನ್, ನಗರ ಪ್ರಧಾನ ಕಾರ್ಯದರ್ಶಿ ಬಿ.ಸಂಪತ್, ಕೆ.ದೇವ ರಾಜ್, ಕೆ.ಜಿ.ರಮೇಶ್ ಇನ್ನಿತರರು ಚಿತ್ರದಲ್ಲಿದ್ದಾರೆ.

೧೭ಕ್ಕೆ ವಧುವರರ ಸಮಾವೇಶ

ಮೈಸೂರು,ಸೆ.೧೨– ಜೆಎಸ್‌ಎಸ್ ವಿವಾಹ ವೇದಿಕೆ ಆಶ್ರಯದಲ್ಲಿ ವಧೂ–ವರರ ಮುಖಾಮುಖಿ ಸಮಾವೇಶವನ್ನು ಸೆ.೧೭ರಂದು ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಏರ್ಪಡಿಸಲಾಗಿದೆ.

ವಿವರಗಳಿಗೆ ದೂ.ಸಂ.೦೮೨೧–೨೪೩೦೩೨೨, ೯೬೧೧೦೭೦೬೭೪ ಸಂಪರ್ಕಿಸಬಹುದು.

ದೇಶ /ವಿದೇಶ

ನರೋದಾ ದೊಂಬಿ ಪ್ರಕರಣ: ಅಮಿತ್ ಶಾಗೆ ಎಸ್‌ಐಟಿ ಸಮನ್ಸ್

ಅಹ್ಮದಾಬಾದ್,ಸೆ.೧೨–೨೦೦೨ರ ನರೋದಾ ಗಾಮ್ ದೊಂಬಿ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ವಿಶೇಷ ನ್ಯಾಯಾಲಯ ಬಿಜೆಪಿ ಅಧ್ಯಕ್ಷ ಅಮಿತ್ ಶಾ ಅವರಿಗೆ ಗುಜರಾತ್ ಮಾಜಿ ಸಚಿವೆ ಮಾಯಾ ಕೊದ್ನಾನಿ ಅವರಿಗಾಗಿ ಓರ್ವ ಡಿಫೆನ್ಸ್ ಸಾಕ್ಷಿದಾರನ್ನಾಗಿ ತನ್ನ ಮುಂದೆ ಹಾಜರಾಗುವಂತೆ ಸಮನ್ಸ್ ನೀಡಿದೆ.

ಕೊದ್ನಾನಿ ಅವರು ಈ ನರೋದಾ ಗಾಮ್ ದೊಂಬಿ ಪ್ರಕರಣದ ಓರ್ವ ಪ್ರಮುಖ ಆರೋಪಿಯಾಗಿದ್ದಾರೆ. ಕೊದ್ನಾನಿ ಸಲ್ಲಿಸಿರುವ ಅರ್ಜಿಯನ್ನು ಪರಿಗಣಿಸಿರುವ ಎಸ್‌ಐಟಿ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಪಿ.ಬಿ.ದೇಸಾಯಿ ಅವರು ಅಮಿತ್ ಶಾ ಅವರಿಗೆ ಸೆ.೧೮ರಂದು ತನ್ನ ಮುಂದೆ ಹಾಜರಾಗುವಂತೆ ಸಮನ್ಸ್ ಜಾರಿ ಮಾಡಿದರು.

ನಿಗದಿ ದಿನದಂದು (ಸೆ.೧೮) ಶಾ ಅವರು ಹಾಜರಾಗಲು ವಿಫಲರಾದರೆ ತಾನು ಪುನಃ ಅವರಿಗೆ ಸಮನ್ಸ್ ಜಾರಿ ಮಾಡುವುದಿಲ್ಲ ಎಂದು ನ್ಯಾಯಾಲಯ ಹೇಳಿತು. ಕೊದ್ನಾನಿ ಅವರ ವಕೀಲ ಅಮಿತ್ ಪಟೇಲ್ ಅವರು ಅಮಿತ್ ಶಾ ಅವರ ಅಹ್ಮದಾಬಾದ್ ನಗರದ ಥಾಲತೇಜ್ ಪ್ರದೇಶದಲ್ಲಿನ ನಿವಾಸದ ವಿಳಾಸವನ್ನು ನ್ಯಾಯಾಲಯಕ್ಕೆ ಸಲ್ಲಿಸಿದುದನ್ನು ಅನುಸರಿಸಿ ನ್ಯಾಯಾಲಯವು ಶಾ ಅವರ ಈ ವಿಳಾಸಕ್ಕೆ ಸಮನ್ಸ್ ಜಾರಿ ಮಾಡಿತು.

ಗೌರಿ ಲಂಕೇಶ್ ಹತ್ಯೆ ಉಲ್ಲೇಖಿಸಿದ್ದ ಶಶಿಕಲಾ

ಕೇರಳ ಹಿಂದೂ ಐಕ್ಯವೇದಿ ನಾಯಕಿ ವಿರುದ್ಧ ಪ್ರಕರಣ

ಕೋಯಿಕ್ಕೋಡ್,ಸೆ.೧೨–ಜಾತ್ಯತೀತ ಬರಹಗಾರರು ದೀರ್ಘಾಯುಷ್ಯಕ್ಕಾಗಿ ಪ್ರಾರ್ಥನೆ ಮಾಡದಿದ್ದರೆ ಪತ್ರಕರ್ತೆ ಗೌರಿ ಲಂಕೇಶ್ ಅವರಿಗಾದ ಗತಿಯಾಗಲಿದೆ ಎಂದು ಹೇಳಿಕೆ ನೀಡಿದ ಹಿಂದೂ ಐಕ್ಯವೇದಿಯ ಕೇರಳ ಘಟಕದ ಅಧ್ಯಕ್ಷೆ ಕೆ.ಪಿ.ಶಶಿಕಲಾ (ಶಶಿಕಲಾ ಟೀಚರ್) ವಿರುದ್ಧ ಪರವೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಎರ್ನಾಕುಲಂನ ಉತ್ತರ ಪರವೂರಿನಲ್ಲಿ ಸೆ.೮ರಂದು ಮಾಡಿದ್ದಾರೆ ಎನ್ನಲಾದ ಭಾಷಣದ ವಿರುದ್ಧ ಕಾಂಗ್ರೆಸ್ ಶಾಸಕ ವಿ.ಡಿ.ಸತೀಶನ್ ದೂರು ನೀಡಿದ್ದರು. ಇದರಂತೆ ಭಾರತೀಯ ದಂಡ ಸಂಹಿತೆಯ ವಿಧಿ ೧೫೩ಎ ಅನ್ವಯ ಪ್ರಕರಣ ದಾಖಲಿಸಲಾಗಿದೆ ಎಂದು ದಿ ನ್ಯೂಸ್ ಮಿನಿಟ್ ವರದಿ ಮಾಡಿದೆ.

ಗೌರಿ ಲಂಕೇಶ್ ಹತ್ಯೆ ಪ್ರಕರಣವನ್ನು ಬಳಸಿಕೊಂಡು ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಅಧಿಕಾರ ಉಳಿಸಿಕೊಳ್ಳಲು ಕರ್ನಾಟಕ ಕಾಂಗ್ರೆಸ್ ಪ್ರಯತ್ನಿಸುತ್ತಿದೆ ಎಂದು ಶಶಿಕಲಾ ಟೀಚರ್ ಭಾಷಣದಲ್ಲಿ ಉಲ್ಲೇಖಿಸಿದ್ದರು. 'ನೀವು ಹೆಚ್ಚು ಕಾಲ ಬದುಕಬೇಕು ಎಂದು ಬಯಸುತ್ತೀರಾದರೆ ನಿಮ್ಮ ಸಮೀಪದ ದೇಗುಲದಲ್ಲಿ ಮೃತ್ಯುಂಜಯ ಪೂಜೆ (ದೀರ್ಘಾಯುಷ್ಯಕ್ಕಾಗಿ ಮಾಡುವ ಪೂಜೆ) ಮಾಡಿಸಿಕೊಳ್ಳಿ' ಎಂದು ಶಶಿಕಲಾ ಹೇಳಿದ್ದರು. ಇದನ್ನು ಜಾತ್ಯತೀತ ಬರಹಗಾರರಿಗೆ ಒಡ್ಡಿದ ಬೆದರಿಕೆ ಎಂದು ಪರಿಗಣಿಸಲಾಗಿದೆ.

ಇಂದಿನ ಕಾರ್ಯಕ್ರಮಗಳು...

- **ಯೋಗಾಸನ ಶಿಬಿರ**

ಬೆಳಿಗ್ಗೆ ೬ಕ್ಕೆ, ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಉಚಿತ ಯೋಗಾಸನ, ಪ್ರಾಣಾಯಾಮ ಹಾಗೂ ಧ್ಯಾನ ಶಿಬಿರ, ಸ್ಥಳ–ಜೆಎಸ್ ಎಸ್ ಸುತ್ತೂರು ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು.

- **ಮಹದೇಶ್ವರ ಜಯಂತಿ**

ಬೆಳಿಗ್ಗೆ ೬ಕ್ಕೆ, ಮಲೆ ಮಹದೇಶ್ವರ ಜಯಂತಿ ಮಹೋತ್ಸವ ಸಮಿತಿ,ಸಂಕಲ್ಪ ಅಭಿಷೇಕ, ರುದ್ರಾಭಿಷೇಕ, ಸಂಜೆ ಶ್ರೀ ಗುರುಶಾಂತ ಸ್ವಾಮೀಜಿ, ಶ್ರೀ ಬಸವಲಿಂಗ ಸ್ವಾಮೀಜಿ, ಶ್ರೀ ಚಂದ್ರಶೇಖರ ಸ್ವಾಮೀಜಿ ಉಪಸ್ಥಿತಿಯಲ್ಲಿ ಮಹಾ ಮಂಗ ಳಾರತಿ, ಪ್ರಸಾದ ವಿನಿಯೋಗ, ಸ್ಥಳ–ಸೀತಾ ರಾಮರಾವ್ ರಸ್ತೆ, ಕೆ.ಆರ್.ಮೊಹಲ್ಲಾ.

- **ಮಹದೇಶ್ವರಸ್ವಾಮಿ ಜಯಂತಿ ಮಹೋತ್ಸವ**

ಬೆಳಿಗ್ಗೆ ೭ಕ್ಕೆ, ಶ್ರೀ ಮಲೆ ಮಹದೇಶ್ವರ ಮಹಾಸ್ವಾಮಿ ಜಯಂತಿ ಮಹೋತ್ಸವದ ಪ್ರಯುಕ್ತ ಗಣಪತಿ ಪೂಜೆ, ಕಳಸ ಸ್ಥಾಪನೆ, ರುದ್ರಾಭಿಷೇಕ, ಬೆಳಿಗ್ಗೆ ೧೧.೩೦ಕ್ಕೆ, ಸ್ವಾಮಿಗೆ ಸಹಸ್ರಾರ್ಚನೆ, ಮಹಾ ಮಂಗಳಾರತಿ, ಮಧ್ಯಾಹ್ನ ೧೨ಕ್ಕೆ ಧಾರ್ಮಿಕ ಕಾರ್ಯಕ್ರಮ, ೧.೩೦ಕ್ಕೆ ಅನ್ನದಾಸೋಹ, ಸ್ಥಳ–ದೇವಸ್ಥಾನದ ಆವರಣ, ಚಿಕ್ಕೇಗೌಡನ ಹುಂಡಿ, ವರುಣಾ ಹೋಬಳಿ, ಮೈಸೂರು ತಾ.

- **ಕೃಷ್ಣ ಜನ್ಮಾಷ್ಟಮಿ ಪೂಜಾ ಕಾರ್ಯಕ್ರಮ**

ಬೆಳಿಗ್ಗೆ ೯.೩೦ಕ್ಕೆ, ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್, ಕೃಷ್ಣಾಷ್ಟಮಿ ಪ್ರಯುಕ್ತ ಅಮೃತ ಕಲಶಾಭಿಷೇಕ, ಮಧ್ಯಾಹ್ನ ೧೨ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ರಾತ್ರಿ ೮ಕ್ಕೆ, ಸ್ನಪನಮೂರ್ತಿಗೆ ಅಭಿಷೇಕ, ಸ್ಥಳ–ಆಳ್ವಾರ್ ಕಲಾಭವನ, ಶ್ರೀ ಕೃಷ್ಣ ದೇವಸ್ಥಾನದ ಪ್ರಾಂಗಣ, ಗೋಕುಲಂ ೩ನೇ ಹಂತ.

- **ಅಂತರ ಕಾಲೇಜು ಸ್ಪರ್ಧೆಗಳು**

ಬೆಳಿಗ್ಗೆ ೧೦ಕ್ಕೆ, ಮೈಸೂರು ಮಕ್ಕಳ ಕೂಟ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಬಾಲಕಿಯರ ಪದವಿಪೂರ್ವ ಕಾಲೇಜು, ಅಂತರ ಕಾಲೇಜು ಸ್ಪರ್ಧೆಗಳು, ವಿಷಯ–ವಿಜ್ಞಾನ ಉಪನ್ಯಾಸ ಸ್ಪರ್ಧೆ, ಭಗವದ್ಗೀತೆ ಸ್ಪರ್ಧೆ, ಸ್ಥಳ–ಕಾಲೇಜಿನ ಆವರಣ, ಕೃಷ್ಣಮೂರ್ತಿಪುರಂ.

- **ಪ್ರತಿಭಾ ಕಾರಂಜಿ**

ಬೆಳಿಗ್ಗೆ ೧೦ಕ್ಕೆ, ಮೈಸೂರು ಉತ್ತರ ವಲಯ, ಬ್ಲಾಕ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ, ಉದ್ಘಾಟನೆ–ಶಾಸಕ ವಾಸು, ಅಧ್ಯಕ್ಷತೆ–ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ತನ್ವೀರ್ ಸೇಠ್, ಸ್ಥಳ–ಸಂತ ಆನ್ಸ್ ಪ್ರೌಢಶಾಲೆ, ಎನ್.ಆರ್. ಮೊಹಲ್ಲಾ.

- **ಪ್ರಧಾನಮಂತ್ರಿ ಕೌಶಲ್ಯ ವಿಕಾಸ ಯೋಜನೆ ಉದ್ಘಾಟನೆ**

ಬೆಳಿಗ್ಗೆ ೧೦.೩೦ಕ್ಕೆ, ಉದ್ಘಾಟನೆ–ಸಂಸದ ಪ್ರತಾಪಸಿಂಹ, ಜ್ಯೋತಿ ಬೆಳಗಿಸುವವರು–ಮಹಾಪೌರ ಎಂ.ಜೆ.ರವಿಕುಮಾರ್, ಅಧ್ಯಕ್ಷತೆ–ಜಿಪಂ ಸಿಇಓ ಪಿ.ಶಿವಶಂಕರ್, ಮುಖ್ಯ ಅತಿಥಿ ಗಳು–ಜಿಪಂ ಉಪಕಾರ್ಯದರ್ಶಿ ಶಿವಕುಮಾರಸ್ವಾಮಿ, ನಗರಪಾಲಿಕೆ ಸದಸ್ಯೆ ಮಹದೇವಮ್ಮ, ಸ್ಥಳ–ಭರಣಿ ಫೌಂಡೇಷನ್, ನಂ.೮೫೪, ೨ನೇ ಮಹಡಿ, ಸಂಗೀತ ಕಾರ್ನರ್, ಸಿದ್ಧಾರ್ಥನಗರ.

- **ಶ್ರದ್ಧಾಂಜಲಿ ಕಾರ್ಯಕ್ರಮ**

ಬೆಳಿಗ್ಗೆ ೧೧ಕ್ಕೆ, ಹಿರಿಯ ಹೋರಾಟಗಾರ, ಪತ್ರಿಕಾ ಸಂಪಾದಕ ಗೋ.ಹನುಮಂತ ಶೆಟ್ಟಿ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ, ಭಾಗವಹಿಸುವವರು–ಹೋರಾಟಗಾರರು, ಪ್ರಗತಿಪರ ಚಿಂತಕರು, ಸ್ಥಳ–ಕುವೆಂಪು ಉದ್ಯಾನವನ.

ಕ್ರೀಡಾ ಚಟುವಟಿಕೆಗಳ ಉದ್ಘಾಟನೆ

ಬೆಳಿಗ್ಗೆ ೧೧ಕ್ಕೆ, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ೨೦೧೭–೧೮ನೇ ಸಾಲಿನ ಸಾಂಸ್ಕೃತಿಕ ಎನ್‌ಎಸ್‌ಎಸ್, ಎನ್‌ಸಿಸಿ ಮತ್ತು ಕ್ರೀಡಾ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ–ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮುಖ್ಯ ಅತಿಥಿಗಳು–ಶಾಸಕ ವಾಸು, ಚಿತ್ರನಟಿ ವಿದುಷಿ ಯಮುನಾ ಶ್ರೀನಿಧಿ, ಅಧ್ಯಕ್ಷತೆ–ಕಾಲೇಜಿನ ಪ್ರಾಂಶುಪಾಲ ಡಾ.ಅಣ್ಣೇಗೌಡ, ಸ್ಥಳ–ಕಾಲೇಜಿನ ಒಳ ಆವರಣ.

- **ಸಂಸ್ಮರಣೆ ಕಾರ್ಯಕ್ರಮ**

ಬೆಳಿಗ್ಗೆ ೧೧ಕ್ಕೆ, ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆ, ದಿ.ಟಿ.ಎಸ್.ಸುಬ್ಬಣ್ಣನವರ ೨೬ನೇ ವರ್ಷದ ಸಂಸ್ಮರಣೆ, ಉದ್ಘಾಟನೆ–ನಗರ ಪಾಲಿಕೆ ಸದಸ್ಯ ಎಂ.ಸುನಿಲ್, ಪುತ್ಥಳಿ ಅನಾವರಣ–ಮಾಜಿ ಶಾಸಕ ಹೆಚ್.ಗಂಗಾಧರನ್, ನಿವೃತ್ತ ನೌಕರರಿಗೆ ಸನ್ಮಾನ–ಸಂಸ್ಥೆಯ ಆಡಳಿತಾಧಿಕಾರಿ ಎಸ್.ಗುರುಸ್ವಾಮಿ, ಪ್ರತಿಭಾ ಪುರಸ್ಕಾರ–ವಕೀಲೆ ಎಸ್.ಶಶಿಬಿಂಬ, ಮುಖ್ಯಶಿಕ್ಷಕರಿಗೆ ಸನ್ಮಾನ–ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಪ್ರಕಾಶ್, ಅಧ್ಯಕ್ಷತೆ–ಆಡಳಿತಾಧಿ ಕಾರಿ ಸಿ.ಬಸವೇಗೌಡ, ಸ್ಥಳ–ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆ, ವಿದ್ಯಾರಣ್ಯಪುರಂ.

- **ಅಭಿನಂದನಾ ಸಮಾರಂಭ**

ಮಧ್ಯಾಹ್ನ ೧೨ಕ್ಕೆ, ಭಾರತೀಯ ಸಾಂಸ್ಕೃತಿಕ ವಿಕಾಸ ವೇದಿಕೆ, ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಜೆ.ಲೋಕೇಶ್‌ಬಾಬು ಅವರಿಗೆ ಗೌರವಾಭಿನಂದನೆ, ಅಭಿನಂದಿಸುವವರು–ಶಾಸಕ ಕಳಲೆ ಕೇಶವಮೂರ್ತಿ, ಅತಿಥಿಗಳು–ಕೆ.ಎಸ್. ರಘುರಾಮಯ್ಯ ವಾಜಪೇಯಿ, ನಟರಾಜ ಜೋಯಿಸ್, ಎಸ್.ಎಂ.ಜವರೇಗೌಡ, ಡಾ.ಎಸ್. ಶಿವರಾಜಪ್ಪ, ಮಡ್ಡೀಕೆರೆ ಗೋಪಾಲ್, ಡಿ.ಸಿ.ದರ್ಶಿನಿ ರಂಗನಾಥ್, ಅಧ್ಯಕ್ಷತೆ–ಪತ್ರಕರ್ತರ ಸಂಘದ ಅಧ್ಯಕ್ಷ ಸಿ.ಕೆ.ಮಹೇಂದ್ರ, ಸ್ಥಳ–ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ.

- **ಸ್ಮಾರಕ ಉಪನ್ಯಾಸ**

ಸಂಜೆ ೪.೩೦ಕ್ಕೆ, ಹಾ.ಮಾ.ನಾ. ಪ್ರತಿಷ್ಠಾನ, 'ಬಹುತ್ವದ ವಿನ್ಯಾಸಗಳು' ಎಂಬ ವಿಷಯವಾಗಿ ೨೦೧೭ನೇ ಸಾಲಿನ ಹಾ.ಮಾ. ನಾಯಕ ಸ್ಮಾರಕ ಉಪನ್ಯಾಸ, ಉಪನ್ಯಾಸಕರು–ಜೆಎನ್‌ಯು ಪ್ರಾಧ್ಯಾಪಕ ಪ್ರೊ.ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ–ಪ್ರತಿಷ್ಠಾನದ ಅಧ್ಯಕ್ಷ ಡಾ.ಎಸ್.ಎಲ್. ಭೈರಪ್ಪ, ಸ್ಥಳ–ಬಿಎಂಶ್ರೀ ಸಭಾಂಗಣ, ಮಾನಸ ಗಂಗೋತ್ರಿ.

- **ಶಾಂತಿ ಸಭೆ**

ಸಂಜೆ ೫.೩೦ಕ್ಕೆ, ಬರ್ಮಾದಲ್ಲಿ ಮುಸ್ಲಿಮರ ಹತ್ಯೆಯನ್ನು ಖಂಡಿಸಲು ಶಾಂತಿ ಸಭೆ, ಪತ್ರಕರ್ತೆ ದಿ.ಗೌರಿ ಲಂಕೇಶ್ ಅವರಿಗೆ ಶ್ರದ್ಧಾಂಜಲಿ ಸಭೆ, ಭಾಗವಹಿಸುವವರು–ಸರ್ ಖಾಜಿ ಮೈಸೂರು, ಕೆ.ಎಸ್.ಭಗವಾನ್, ಬಸವಲಿಂಗ ಸ್ವಾಮಿ, ಮುಫ್ತಿ ತಾಜುದ್ದೀನ್, ಅಯೂಬ್‌ಖಾನ್, ನಬೀಲ್ ಮೊಹಮದ್ ಖಾನ್, ಎಂ.ಎಫ್ ಖಲೀಂ, ಸ್ಥಳ–ಮಿಲಾದ್ ಉದ್ಯಾನವನ, ಅಶೋಕ ರಸ್ತೆ.

- **ಶ್ರೀ ಕೃಷ್ಣ ಲೀಲೋತ್ಸವ**

ಸಂಜೆ ೬ಕ್ಕೆ, ಬೆಳ್ಳಿಪ್ಪಾಡಿ ಯಕ್ಷ ಸಾಂಸ್ಕೃತಿಕ ಟ್ರಸ್ಟ್, ಮಹಾಗಣಪತಿ ಯಕ್ಷಗಾನ ಮಂಡಳಿ ತಂಡದಿಂದ ೭ ದಿನಗಳ ಶ್ರೀ ಕೃಷ್ಣ ಲೀಲೋತ್ಸವ, ಉದ್ಘಾಟನೆ–ಯಕ್ಷಗಾನ ಚಿಂತಕ ಪ್ರೊ.ಜಿ.ಎಸ್.ಭಟ್ಟ, ಮುಖ್ಯ ಅತಿಥಿ–ಪತ್ರಿಕೋದ್ಯಮಿ ಕೆ.ಬಿ.ಗಣಪತಿ, ಯಕ್ಷಗಾನ ಪ್ರದರ್ಶನ–ಶ್ರೀ ಕೃಷ್ಣ ಜನ್ಮ ಶಕಟಾ ಸುರವಧೆ, ಸ್ಥಳ–ಶ್ರೀ ಕೃಷ್ಣಧಾಮ, ಸಾಹುಕಾರ್ ಚೆನ್ನಯ್ಯ ರಸ್ತೆ, ಸರಸ್ವತಿಪುರಂ.

- **ಪ್ರಶಸ್ತಿ ಪ್ರದಾನ**

ಸಂಜೆ ೬.೩೦ಕ್ಕೆ, ರೋಟರಿ ಕ್ಲಬ್ ಮೈಸೂರು ಮಿಡ್‌ಟೌನ್, ಪ್ರೊ.ಎಂ.ಜಿ. ನಂಜುಂಡಾರಾಧ್ಯ ಸ್ಮಾರಕ ರೋಟರಿ ಮೈಸೂರು ಮಿಡ್‌ಟೌನ್–'ಅಮರವಾಣಿ' ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಸ್ವೀಕರಿಸುವವರು–ವನ್ಯಜೀವಿ ಛಾಯಾಗ್ರಾಹಕ ಎಸ್.ತಿಪ್ಪೇಸ್ವಾಮಿ, ಪ್ರದಾನ ಮಾಡುವವರು –ಡಾ.ಸಿ.ಕೆ.ಎನ್.ರಾಜ, ಸ್ಥಳ–ರೋಟರಿ ಕೇಂದ್ರ ಸಭಾಂಗಣ, ಜೆಎಲ್‌ಬಿ ರಸ್ತೆ.

- **ನಾಟಕ ಪ್ರದರ್ಶನ**

ಸಂಜೆ ೬.೩೦ಕ್ಕೆ, ರಂಗಾಯಣ, ಬಿ.ವಿ. ಕಾರಂತ ಕಾಲೇಜು ರಂಗೋತ್ಸವದ ಪ್ರಯುಕ್ತ ಸಂತ ಫಿಲೋಮಿನಾ ಪದವಿ ಕಾಲೇಜಿನ ತಂಡ ದಿಂದ ಗ್ರಾಮದೇವತೆ ನಾಟಕ ಪ್ರದರ್ಶನ, ಸ್ಥಳ–ಭೂಮಿಗೀತ ರಂಗಮಂದಿರ, ರಂಗಾಯಣ.

- **ಶ್ರೀಕೃಷ್ಣ ಜಯಂತಿ**

ಸಂಜೆ ೭ಕ್ಕೆ, ಮೈಸೂರು ನಗರ ಮತ್ತು ಜಿಲ್ಲಾ ಯಾದವ ಯುವ ಸಂಘ, ೩೫ನೇ ವರ್ಷದ ಕೃಷ್ಣ ಜಯಂತಿ ಪ್ರಯುಕ್ತ ಮಹಾಗಣಪತಿಗೆ ಬೆಣ್ಣೆ ಅಲಂಕಾರ, ವಿಶೇಷ ಪೂಜೆ, ರಾತ್ರಿ ೧೦ಕ್ಕೆ, ಶ್ರೀಕೃಷ್ಣ ದೇವರ ಪ್ರತಿಷ್ಠಾಪನೆ, ಮುಖ್ಯ ಅತಿಥಿಗಳು–ಮುಡಾ ಅಧ್ಯಕ್ಷ ಡಿ.ಧ್ರುವಕುಮಾರ್, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಅಧ್ಯಕ್ಷ ನಾಗರಾಜ್ ಯಾದವ್, ಟಿ.ಮಹದೇವು, ಗಣೇಶ್ ಯಾದವ್, ಸ್ಥಳ–ಸಂಘದ ಆವರಣ, ದಿವಾನ್ಸ್ ರಸ್ತೆ.

ಮೈಸೂರು ಆಕಾಶವಾಣಿ

ಬೆಳಿಗ್ಗೆ ೬.೧೦ ಗೀತಾರಾಧನ, ೬.೩೦ ಚಿಂತನ–ರಾಜಲಕ್ಷ್ಮಿ ಸುಬ್ರಹ್ಮಣ್ಯಂ, ೬.೪೫ 'ಅರಿವಿನ ಶಿಖರ'–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಪ್ರಾಯೋಜಿತ ಸರಣಿ, ವ್ಯಾಖ್ಯಾನ–ಡಾ.ಹೆಚ್.ಎನ್. ಮಂಜುರಾಜ್, ಗಾಯನ–ಜಯಂತಿ ವಿ.ಭಟ್, ಸಂಗೀತಾ, ೭.೧೫ ಅಲ್ಪ ಸಂಖ್ಯಾತರ ಆಶಾಕಿರಣ–ಪ್ರಾಯೋಜಿತ ಕಾರ್ಯ ಕ್ರಮ, ೮.೩೫ ಎಂ ಸ್ಯಾಂಡ್ ನನ್ನ ಮರಳು–ಪ್ರಾಯೋಜಿತ ಕಾರ್ಯಕ್ರಮ, ೯.೦೫ ಅಮೂಲ್ಯ ವಾದ ಕಣ್ಣುಗಳು–ಪ್ರಾಯೋಜಿತ ಕಾರ್ಯಕ್ರಮ, ೧೦.೦೦ ಡಿ.ಕೆ.ಪಟ್ಟಮ್ಮಾಳ್–ಹಾಡುಗಾರಿಕೆ, ೧೧.೦೦ ಕಾಮನಬಿಲ್ಲು–'ಹಾದಿಯಲ್ಲಿ ಕಂಡ ಮುಖ', ಪ್ರಸ್ತುತಿ–ಅಬ್ದುಲ್ ರಶೀದ್.

ಮಧ್ಯಾಹ್ನ ೧೨.೩೦ ಮಹಿಳಾರಂಗ–ಹೆಚ್ಚುತ್ತಿರುವ ತಾಪಮಾನ–ನಮ್ಮ ಕರ್ತವ್ಯ–ಗಿರಿಜಾ ಸಿದ್ದಪ್ಪಾಜಿ ಅವರಿಂದ, ೧.೦೦ ದೇವರನಾಮ–ಕೆ.ಎಂ.ಚಂದ್ರಿಕಾ, ೧.೨೦ ಭಾವಗೀತೆ, ೧.೩೦ ಮಧ್ಯಾಹ್ನದ ಮಾಧುರ್ಯ, ೨.೩೫ ಬಾನ್ ದನಿ–ಪೂರಕ ಶಿಕ್ಷಣ ಕಾರ್ಯಕ್ರಮ, ೪.೩೦ ಜನಪದ ಗೀತೆ– ಕೆಂಚಮ್ಮ ಮತ್ತು ಸಂಗಡಿಗರು.

ಸಂಜೆ ೫.೦೦ ಚಿತ್ರಗೀತೆ, ೫.೫೦ ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳ ವಾಚನ–ವ್ಯಾಖ್ಯಾನದ ಮರುಪ್ರಸಾರ, ೬.೧೫ ಜನಪದಗೀತೆ–ಕೃಷ್ಣೇಗೌಡ ಮತ್ತು ಸಂಗಡಿಗರು, ೬.೫೦ ಕೃಷಿ ರಂಗ–ಕಿಸಾನ್‌ವಾಣಿ–ಜೋಡಿ ಸಾಲು ಪದ್ಧತಿಯಲ್ಲಿ ಹಿಪ್ಪು ನೇರಳೆ ಬೇಸಾಯ ಕುರಿತು ಡಾ. ಬಿ.ಟಿ.ಶ್ರೀನಿವಾಸ್ ಅವರೊಂದಿಗೆ ಸಂದರ್ಶನ, ೮.೦೦ ಯುವವಾಣಿ–ಯುವಸ್ಪಂದನ–ಪ್ರಸ್ತುತಿ– ಶಾಂತಿ ಸಿ.ಭಾರದ್ವಾಜ್, ೯.೧೬ ಹಿಂದಿ ಪಾಠ, ೯.೩೦ ಕರ್ನಾಟಕ ಶಾಸ್ತ್ರೀಯ ಸಂಗೀತ, ೧೦.೦೦ ಸವಿನೆನಪು.